(ಇಂದು ದಿನಾಂಕಃ 17-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ  ಬೋಧಿಸಲಾಯಿತು.)

**<u>ಪಾಟೀ ಸವಾಲುಃ  ಪ್ರತಿವಾದಿ ನಂ.1 ರಿಂದ 12 ರವರ ಪರಃ ಶ್ರೀ ಆರ್.ವಿ.ಬಿ. ವಕೀಲರಿಂದಃ</u>**

ದಾವಾ ಸ್ವತ್ತುಗಳು ಮೂಲತಃ ಯಾರಿಂದ ಬಂದಿವೆ ಮತ್ತು ಯಾವ ರೀತಿಯಾಗಿ ಬಂದಿವೆ ಎಂದು ನನಗೆ ಮಾಹಿತಿ ಇದೆ. ದಾವಾ ಸ್ವತ್ತುಗಳು ಮೂಲತಃ ಗೇಣಿ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳು ಪರ್ತಗಾಳಿ ಮಠಕ್ಕೆ ಸೇರಿದಂತಹ ಆಸ್ತಿಗಳು ಎಂದರೆ ಸರಿ. ತಿಮ್ಮಾ ಬುದವಂತ ಗೌಡ ಇವರು ಚಾಲಗೇಣಿ ನಾತೆಯಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. 1973 ರಲ್ಲಿ ತಿಮ್ಮಾ ಬುದವಂತ ಗೌಡ ಇವರು ಫಾರ್ಮ್ ನಂ.7 ನ್ನು ಸಲ್ಲಿಸಿ ಭೂನ್ಯಾಯಮಂಡಳಿಯಿಂದ ಮಂಜೂರು ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ನಾನು ದಾನು ಗೌಡ ಇವರ ಕುಟುಂಬಕ್ಕೆ ಸಂಬಂಧಿಸಿದವಳು ಎಂದರೆ ಸರಿ. ದಾನು ಬುದವಂತ ಗೌಡ ಮತ್ತು ಅವರ ಸಹೋದರ ತಿಮ್ಮಾ ಬುದವಂತ ಗೌಡ ಇವರು ಜೀವಿತ ಇರುವಾಗ ಬೇರೆ ಬೇರೆ ಮನೆಗಳನ್ನು ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ

ಸರಿಯಲ್ಲ. ಸದರಿಯವರಿಗೆ ಸಂಬಂಧಪಟ್ಟಂತೆ ತುಳಸಿ ಕಟ್ಟೆ ಮತ್ತು ಅಡುಗೆ ಮನೆಗಳು ಬೇರೆ ಬೇರೆ ಇದ್ದವು ಎಂದರೆ ಸರಿಯಲ್ಲ. ತಿಮ್ಮಾ ಬುದವಂತ ಗೌಡ ಮತ್ತು ದಾನು ಬುದವಂತ ಗೌಡ ಇವರು ಜಂಟಿ ಕುಟುಂಬದಲ್ಲಿ ವಾಸವಾಗಿದ್ದರು ಎಂದು ತೋರಿಸಲು ದಾಖಲಾತಿಗಳು ಇವೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ನನಗೇನೂ ತೊಂದರೆ ಇಲ್ಲ ಎಂದರೆ ಸರಿ. ತಿಮ್ಮಾ ಬುದವಂತ ಗೌಡ ಇವರ ಹೆಸರಿನಲ್ಲಿ ಮಂಜೂರಾದ ಜಮೀನಿಗೆ ಸಂಬಂಧಪಟ್ಟಂತೆ ದಾನು ಗೌಡ ಇವರ ಕುಟುಂಬದ ಸದಸ್ಯರು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ಪ್ರಶ್ನಿಸಿದ್ದೇವೆ ಎಂದು ತೋರಿಸಲು ದಾಖಲಾತಿಗಳು ಇವೆ. ಅವುಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ತೊಂದರೆ ಇಲ್ಲ. ದಾನು ಗೌಡ ಇವರ ಕುಟುಂಬದವರು ಭೂನ್ಯಾಯಮಂಡಳಿಯವರು ಮಾಡಿದಂತಹ ಆದೇಶವನ್ನು ಎಲ್ಲಿಯೂ ಪ್ರಶ್ನಿಸಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾಸ್ತಿಗಳ ಪೈಕಿ ಕೆಲವು ಆಸ್ತಿಗಳು ಕೊಂಕಣ ರೈಲ್ವೆ ಸಲುವಾಗಿ ಭೂಸ್ವಾಧೀನಗೊಂಡಿವೆ ಎಂದರೆ ಸರಿ. ಭೂಸ್ವಾಧೀನ ಅಧಿಕಾರಿಗಳು ಮಾಡಿದಂತಹ ಅದೇಶದ ಪ್ರಕಾರ ತಿಮ್ಮಾ ಬುದವಂತ ಗೌಡ ಇವರ ಹೆಸರಿನಲ್ಲಿ ಪರಿಹಾರ ಹಣ ಮಂಜೂರು ಆಗಿದೆ ಎಂದರೆ ಸರಿ. ಮಂಜೂರಾದ ಹಣವನ್ನು ತಿಮ್ಮಾ ಬುದವಂತ ಗೌಡ ಇವರು ಪಡೆದಿದ್ದಾರೆ ಎಂದರೆ ಸರಿ. ಭೂಸ್ವಾಧೀನಗೊಂಡ ಜಮೀನಿನಲ್ಲಿ ನಮಗೂ ಸಹ ಭಾಗ ಇದೆ ಎಂದು ಹೇಳಿ ಭೂಸ್ವಾಧೀನ ಅಧಿಕಾರಿಗಳ ಕಚೇರಿಗೆ ಅರ್ಜಿಯನ್ನು ಕೊಟ್ಟಿಲ್ಲ. 1995 ರಲ್ಲಿ ಕೊಂಕಣ ರೈಲ್ವೆ ಸಲುವಾಗಿ ಭೂಸ್ವಾಧೀನಗೊಂಡು ಪರಿಹಾರ ಧನ ಮಂಜೂರಾಗಿದೆ ಎಂದರೆ ಸರಿ. ಭೂಸ್ವಾಧೀನಾಧಿಕಾರಿಗಳು ಆದೇಶ ಮಾಡಿದ ನಂತರ ಪರಿಹಾರ ಧನ ಹೆಚ್ಚಿಗೆ ಕೇಳಿ ಅರ್ಜಿಯನ್ನು ಸಲ್ಲಿಸಿಲ್ಲ.

1990 ರಲ್ಲಿ ನಾನು ಜನಿಸಿದ್ದೇನೆ. 1972-73 ರಲ್ಲಿ ಯಾರು ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದರು ಎಂದು ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ. 1 ನೇ ವಾದಿ ನನಗೆ ದೊಡ್ಡಪ್ಪನಾಗಬೇಕು. ಈ ಪ್ರಕರಣದ ಮಾಹಿತಿ ನನಗಿಂತ 1 ನೇ ವಾದಿಗೆ ಹೆಚ್ಚಿಗೆ ಇದೆ ಎಂದರೆ ಸರಿ.

ಸದರಿಯವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ತೊಂದರೆ ಇಲ್ಲ ಎಂದರೆ ಸರಿ. 1 ನೇ ವಾದಿ ದಾವಾಸ್ತಿಗಳಿಗೆ ಸಂಬಂಧಪಟ್ಟಂತೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹಾಕಿದ್ದರು ಎಂದರೆ ಸರಿ. ಅಸಲು ದಾವಾ ನಂ. 7/2016 ರಂತೆ ದಾವೆ ಸಲ್ಲಿಸಿದ್ದು ಅದು ವಜಾ ಆಗಿದೆ ಎಂದರೆ ಸರಿ. ವಜಾ ಆದ ನಂತರ ಅದನ್ನು ಪುನರ್ ವಿಚಾರಣೆಗೆ ತೆಗೆದುಕೊಳ್ಳಬೇಕೆಂದು ಸಿವಿಲ್ ಮಿಸಲೇನಿಯಸ್ ಕೇಸನ್ನು ದಾಖಲಿಸಿದ್ದರು ಎಂದರೆ ಸರಿ. ಸಿವಿಲ್ ಮಿಸಲೇನಿಯಸ್ ಕೇಸೂ ಸಹ ವಜಾ ಆಗಿದೆ ಎಂದರೆ ಸರಿ. ಈಗಾಗಲೇ ಪಾಲು ವಿಭಾಗ ಕೇಳಿ ದಾವೆ ಸಲ್ಲಿಸಿದ್ದು ಸದರಿ ದಾವೆ ವಜಾ ಆಗಿದ್ದರಿಂದ ಇನ್ನೊಂದು ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. 1975-76 ರಲ್ಲಿ ಭೂನ್ಯಾಯಮಂಡಳಿಯಿಂದ ತಿಮ್ಮಾ ಬುದವಂತ ಗೌಡ ಇವರಿಗೆ ಮಂಜೂರು ಆಗಿರುವುದರಿಂದ ಈ ದಾವೆ ಕಾಲಮಿತಿಯಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ತಿಮ್ಮಾ ಬುದವಂತ ಗೌಡ ಮತ್ತು ದಾನು ಬುದವಂತ ಗೌಡ ಇವರು ಜಂಟಿ ಕುಟಂಬದಲ್ಲಿ ವಾಸವಾಗದೇ ಇದ್ದು ಪ್ರತ್ಯೇಕವಾಗಿ ವಾಸವಾಗಿದ್ದು, ತಿಮ್ಮಾ ಬುದವಂತ ಗೌಡ ಇವರು ತಮ್ಮ ಸ್ವಂತ ನಾತೆಯಿಂದ ದಾವಾ ಸ್ವತ್ತುಗಳನ್ನು ಚಾಲಗೇಣಿ ಆಧಾರದ ಮೇಲೆ ಸಾಗುವಳಿ ಮಾಡುತ್ತಿದ್ದುದರಿಂದ ಭೂನ್ಯಾಯಮಂಡಳಿಯವರು ತಿಮ್ಮಾ ಬುದವಂತ ಗೌಡ ಇವರಿಗೆ ವೈಯಕ್ತಿಕ ನಾತೆಯಿಂದ ಮಂಜೂರು ಮಾಡಿದ್ದಾರೆ ಎಂದರೆ ಸರಿಯಲ್ಲ. ದಾನು ಬುದವಂತ ಗೌಡ ಇವರ ಕುಟುಂಬದವರಿಗೆ ದಾವಾಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಅನ್ನುವುದು ಸರಿಯಲ್ಲ. ತಿಮ್ಮಾ ಬುದವಂತ ಗೌಡ ಇವರು ಕುಟುಂಬದ ಕರ್ತ ಆಗಿ ಯಾವತ್ತೂ ಕೂಡ ಕಾರ್ಯನಿರ್ವಹಿಸಿಲ್ಲ ಅನ್ನುವುದು ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಭಾಗ ತೆಗೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳಿಗೆ ತಿಮ್ಮಾ ಬುದವಂತ ಗೌಡ ಇವರು ಮಾತ್ರ ವಾರಿಸುದಾರರಾಗಿದ್ದು ಉಳಿದವರಿಗೆ ಯಾವುದೇ ಹಕ್ಕು ಇಲ್ಲ ಅನ್ನುವುದು ಸರಿಯಲ್ಲ.

ಸ.ನಂ. 80/10 ರಲ್ಲಿ 7 ನೇ ಪ್ರತಿವಾದಿ ಕೆಲವು ತೆಂಗಿನಮರಗಳನ್ನು ನೆಟ್ಟಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅಲ್ಲಿ ನಮ್ಮದೇ ಮನೆ ಇತ್ತು ಎಂದು ಹೇಳುತ್ತಾರೆ. ಈಗ 7 ನೇ

ಪ್ರತಿವಾದಿ ಸದರಿ ಆಸ್ತಿಯಲ್ಲಿ ತಡೆಗೋಡೆ ಕಟ್ಟಿದ್ದಾರೆ ಎಂದರೆ ಸಾಕ್ಷಿ ಮನೆ ಕಟ್ಟಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಸದರಿಯವರು ಬಾವಿ ತೋಡಿದ್ದಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನಮ್ಮ ತಂದೆ ಮತ್ತು ಅವರು ಸೇರಿ ಕಟ್ಟಿದ್ದಾರೆ ಎಂದು ಹೇಳುತ್ತಾರೆ. 7 ನೇ ಪ್ರತಿವಾದಿ ಅಲ್ಲಿ ನಾಗದೇವತಾ ದೇವಸ್ಥಾನ ಕಟ್ಟಿದ್ದಾರೆ ಎಂದರೆ ಸರಿ. 7 ನೇ ಪ್ರತಿವಾದಿ ಅಲ್ಲಿ ಮನೆಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ಸ.ನಂ. 78 ರಲ್ಲಿ ಅಂಬಾಬಾಯಿ ರಾಮಾ ಶೇಟ್ ಇವರು ನಾಲ್ಕು ಗುಂಟೆ ಜಮೀನನ್ನು ಖರೀದಿಸಿದ್ದಾರೆ ಎಂದರೆ ಸರಿ. ಸ.ನಂ. 78 ರಲ್ಲಿ 37 ಗುಂಟೆ ಜಮೀನು ಕೊಂಕಣ ರೈಲ್ವೆಗೆ ಭೂಸ್ವಾಧೀನಗೊಂಡಿದೆ ಎಂದರೆ ಸರಿ. ಇನ್ನುಳಿದ ಜಾಗದಲ್ಲಿ 7 ನೇ ಪ್ರತಿವಾದಿ ಮನೆಕಟ್ಟಿಕೊಂಡಿದ್ದಾರೆ ಎಂದರೆ ಸರಿ. ಗಾಡಿಯಾ ತಿಮ್ಮಾ ಗೌಡ ಇವರು 4 ಗುಂಟೆ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ಸದರಿಯವರು ಒಂದು ಬಾವಿ ಮತ್ತು ದನದ ಕೊಟ್ಟಿಗೆಯನ್ನು ಕಟ್ಟಿದ್ದಾರೆ ಎಂದರೆ ಸರಿ. ಗಾಡಿಯಾ ತಿಮ್ಮಾ ಗೌಡ ಮತ್ತು ಅಂಬಾಬಾಯಿ ಶೇಟ್ ಇವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಆದ್ದರಿಂದ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು, ಅಧಿಕಾರ ಇಲ್ಲ ಅನ್ನುವುದು ಸರಿಯಲ್ಲ.

(**ಈ ಹಂತದಲ್ಲಿ ಪ್ರತಿವಾದಿ ನಂ. 13 ಮತ್ತು 14 ರವರು ಪರ ವಕೀಲರು ಹಾಜರಿದ್ದು, ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ